## ಕರ್ನಾಟಕ ಸರ್ಕಾರ
## ತಾಂತ್ರಿಕ ಶಿಕ್ಷಣ ಇಲಾಖೆ

ಸಂ:ಡಿಟಿಇ/62/ಇಎಸ್‌ಟಿ(6)/2016

ನಿರ್ದೇಶಕರ ಕಛೇರಿ
ತಾಂತ್ರಿಕ ಶಿಕ್ಷಣ ಇಲಾಖೆ.
ಅರಮನೆ ರಸ್ತೆ,ಬೆಂಗಳೂರು-1
ದಿನಾಂಕ: 05-02-2020.

### ಸುತ್ತೋಲೆ

**ವಿಷಯ:** ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 247ಎ ರನ್ವಯ ಪಿಂಚಣಿ ಉದ್ದೇಶಕ್ಕೆ ಹೆಚ್ಚುವರಿ ಅರ್ಹತಾದಾಯಕ ಸೇವೆಯ ಮಂಜೂರಾತಿಗಾಗಿ ಸಲ್ಲಿಸುವ ಪ್ರಸ್ತಾವನೆ ಬಗ್ಗೆ.

**ಉಲ್ಲೇಖ:**
1. ಸರ್ಕಾರಿ ಆದೇಶ ಸಂಖ್ಯೆ: ಆಇ 9 ಎಸ್‌ಆರ್‌ಎ 2012, ದಿನಾಂಕ:08.09.2016.
2. ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ 01 ಎಸ್‌ಆರ್‌ಎ 2011 ದಿನಾಂಕ:05.03.2011.
3. ಸರ್ಕಾರದ ಸುತ್ತೋಲೆ ಸಂಖ್ಯೆ:ಆಇ 3 ಎಸ್‌ಆರ್‌ಎ 2016 ದಿನಾಂಕ:16.05.2016.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರ ಸರ್ಕಾರದ ಆದೇಶದನ್ವಯ ಪ್ರಾರಂಭದಲ್ಲಿ ದಿನಗೂಲಿ ಅಥವಾ ಮಿತವೇತನ ಪದವೀಧರರಾಗಿ ಸೇವೆ ಸಲ್ಲಿಸಿ ತದನಂತರ ಸೇವೆಯಲ್ಲಿ ಕ್ರಮಬದ್ಧಗೊಳಿಸಲಾದ ನೌಕರರಿಗೆ ಕೆ.ಸಿ.ಎಸ್. ನಿಯಮ 247(ಎ) ರ ಸೌಲಭ್ಯವನ್ನು ನಿಯಮಾನುಸಾರ ಮಂಜೂರು ಮಾಡಲು ಆದೇಶಿಸಿದೆ.

ಉಲ್ಲೇಖ(2)ರ ಸರ್ಕಾರದ ಆದೇಶದ ಕಂಡಿಕೆ(6)ರಲ್ಲಿ ಅರ್ಹತಾದಾಯಕ ಸೇವೆಯೆಂದು ಈ ನಿಯಮಗಳಡಿ ಪರಿಶೀಲಿಸುವಲ್ಲಿ ಸರ್ಕಾರಿ ನೌಕರರು ಈ ಹಿಂದೆ ಸಲ್ಲಿಸಿದ ಸೇವೆಗೆ ಸಂಬಂಧ ಪಟ್ಟ ಮೂಲ ಸೇವಾ ಪುಸ್ತಕಗಳ ಆಧಾರದ ಮೇಲೆ ಮಾತ್ರ ಪರಿಗಣಿಸಬೇಕು. ಸೇವಾ ಪ್ರಮಾಣ ಪತ್ರದ ಆಧಾರದ ಮೇಲೆ ಪರಿಗಣಿಸಲು ಅವಕಾಶವಿಲ್ಲ ಎಂದು ಆದೇಶಿಸಲಾಗಿದೆ.

ಉಲ್ಲೇಖ (3)ರ ಸರ್ಕಾರದ ಸುತ್ತೋಲೆಯಲ್ಲಿ ದಿನಗೂಲಿ ನೌಕರರಾಗಿ ಕಾರ್ಯನಿರ್ವಹಿಸಿ ಸಕ್ರಮಗೊಂಡಿರುವವರೆ ಎಂಬ ಬಗ್ಗೆ ಸೇವಾ ಪುಸ್ತಕದಲ್ಲಿ ಸ್ಪಷ್ಟವಾಗಿ ನಮೂದಿಸುತ್ತಿಲ್ಲ, ಈ ಕಾರಣದಿಂದಾಗಿ, ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 247 ಎ ರ ಸೌಲಭ್ಯವನ್ನು ನೀಡುವಲ್ಲಿ ಆಗುವ ಅನಾವಶ್ಯಕ ಗೊಂದಲವನ್ನು ಹಾಗೂ ವಿಳಂಬವನ್ನು ತಪ್ಪಿಸಲು ಅವರ ನೇಮಕಾತಿ ಸ್ವರೂಪವನ್ನು ಸದರಿ ನೌಕರರ ಸೇವಾ ಪುಸ್ತಕದಲ್ಲಿ ಹಾಗೂ ಹೆಚ್‌.ಆರ್.ಎಂ.ಎಸ್. data ದಲ್ಲಿ ನಮೂದಿಸಿ ಕಳುಹಿಸಲು ಎಲ್ಲಾ ಇಲಾಖಾ ಮುಖ್ಯಸ್ಥರುಗಳಿಗೆ ಸೂಚಿಸಲಾಗಿದೆ.

ಈ ಹಿನ್ನೆಲೆಯಲ್ಲಿ, ತಾಂತ್ರಿಕ ಶಿಕ್ಷಣ ಇಲಾಖಾ ಅಧೀನದ ಸಂಸ್ಥೆಯ ಸಿಬ್ಬಂದಿಗಳಿಗೆ ಕೆಸಿಎಸ್‌ಆರ್ ನಿಯಮ 247ಎ ರನ್ವಯ ಪಿಂಚಣಿ ಉದ್ದೇಶಕ್ಕೆ ಹೆಚ್ಚುವರಿ ಅರ್ಹತಾದಾಯಕ ಸೇವೆಯ ಮಂಜೂರಾತಿಗಾಗಿ ನಿರ್ದೇಶನಾಲಯಕ್ಕೆ ಸಲ್ಲಿಸುವ ಸಂದರ್ಭದಲ್ಲಿ ಸರ್ಕಾರದ ಸುತ್ತೋಲೆಯಲ್ಲಿ ತಿಳಿಸಿರುವಂತೆ ಸಿಬ್ಬಂದಿಯು ದಿನಗೂಲಿ ಅಥವಾ ಮಾಸಿಕ ವೇತನ ಸಿಬ್ಬಂದಿಯಾಗಿ ಕಾರ್ಯನಿರ್ವಹಿಸಿರುವ ಬಗ್ಗೆ ಸದರಿ ಸಿಬ್ಬಂದಿಗಳ ಸೇವಾ ಪುಸ್ತಕವನ್ನು ಪರಿಶೀಲಿಸಿ ಸಲ್ಲಿಸತಕ್ಕದ್ದು.

ಒಂದು ವೇಳೆ ಸದರಿ ಸಿಬ್ಬಂದಿಗಳ ಸೇವಾ ಪುಸ್ತಕದಲ್ಲಿ ದಿನಗೂಲಿ ಅಥವಾ ಮಾಸಿಕ ವೇತನ ಸಿಬ್ಬಂದಿಯಾಗಿ ಕಾರ್ಯನಿರ್ವಹಿಸಿರುವ ಮಾಹಿತಿ ನಮೂದಾಗದೇ ಇದ್ದಲ್ಲಿ ಅಂತಹ ಸೇವಾ ಪುಸ್ತಕವನ್ನು ಸಿಬ್ಬಂದಿಯ ಮಾತೃ ಸಂಸ್ಥೆಗೆ ಕಳುಹಿಸಿ ಸೇವಾ ದಾಖಲಾತಿಗಳನ್ನು ನಮೂದಿಸಿ ಕಳುಹಿಸಲು ತಮ್ಮ ಹಂತದಲ್ಲಿ ಕ್ರಮಕೈಗೊಳ್ಳಬಹುದಾಗಿರುತ್ತದೆ.

ಕೆ.ಸಿ.ಎಸ್. ನಿಯಮ 247(ಎ) ರ ಸೌಲಭ್ಯವನ್ನು ನಿಯಮಾನುಸಾರ ಮಂಜೂರು ಮಾಡಲು ಸಲ್ಲಿಸುವ ಪ್ರಸ್ತಾವನೆಯ ಜೊತೆಗೆ ಈ ಪತ್ರದೊಂದಿಗೆ ಲಗತ್ತಿಸಿರುವ ನಮೂನೆಯನ್ನು ಭರ್ತಿ ಮಾಡಿ ದೃಢೀಕರಿಸಿ ಸಲ್ಲಿಸತಕ್ಕದ್ದು.

ಆಡಳಿತಾಧಿಕಾರಿ
ತಾಂತ್ರಿಕ ಶಿಕ್ಷಣ ಇಲಾಖೆ

**ಇವರಿಗೆ,**

1. ಪ್ರಾಂಶುಪಾಲರು, ಸರ್ಕಾರಿ ಇಂಜಿನಿಯರಿಂಗ್ ಕಾಲೇಜು/ಸರ್ಕಾರಿ ಪಾಲಿಟೆಕ್ನಿಕ್‌./ಕಿರಿಯ ತಾಂತ್ರಿಕ ಶಾಲೆಗಳು.
2. ಇ-ಆಡಳಿತ ವಿಭಾಗ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು. (ವೆಬ್‌ಸೈಟ್‌ನಲ್ಲಿ ಪ್ರಕಟಿಸಲು)

## :: ನಮೂನೆ ::

ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 247ಎ ರನ್ವಯ ಪಿಂಚಣಿ ಉದ್ದೇಶಕ್ಕೆ ಹೆಚ್ಚುವರಿ ಅರ್ಹತಾದಾಯಕ ಸೇವೆಯ ಮಂಜೂರಾತಿಗಾಗಿ ಸಲ್ಲಿಸುವ ಪ್ರಸ್ತಾವನೆ.

**ಸರ್ಕಾರಿ ಪಾಲಿಟೆಕ್ನಿಕ್/ಇಂಜಿನಿಯರಿಂಗ್, ----------**

| | | |
|---|---|---|
| 1 | ಸಿಬ್ಬಂದಿಯವರ ಹೆಸರು | |
| 2 | ಸಿಬ್ಬಂದಿಯ ಜನ್ಮ ದಿನಾಂಕ | |
| 3 | ಹುದ್ದೆ | |
| 4 | ಪ್ರಾರಂಭದಲ್ಲಿ ಸಿಬ್ಬಂದಿಯ ನೇಮಕಾತಿ ಸ್ವರೂಪ (ದಿನಗೂಲಿ/ಖಾಯಂ) (ಆದೇಶದ ಪ್ರತಿಯನ್ನು ಲಗತ್ತಿಸುವುದು). | |
| 5 | ದಿನಗೂಲಿಯಾಗಿ/ಮಿತವೇತನ ಪದವೀಧರರು/ಮಾಸಿಕ ವೇತನ ನೌಕರರು ಸೇವೆಗೆ ಸೇರಿದ ದಿನಾಂಕ | |
| 6 | ದಿನಗೂಲಿಯಾಗಿ/ಮಿತವೇತನ ಪದವೀಧರರು/ಮಾಸಿಕ ವೇತನ ನೌಕರರು ಕರ್ತವ್ಯ ನಿರ್ವಹಿಸಿರುವ ಸೇವಾ ಅವಧಿ ಮತ್ತು ಇಲಾಖೆ | |
| 7 | ಸರ್ಕಾರಿ ಸೇವೆಗೆ ಸಕ್ರಮಗೊಂಡ (ಖಾಯಂಗೊಂಡ) ದಿನಾಂಕ: (ಆದೇಶದ ಪ್ರತಿಯನ್ನು ಲಗತ್ತಿಸುವುದು) | |
| 8 | ಸರ್ಕಾರಿ ಸೇವೆಗೆ ಸಕ್ರಮ/ಖಾಯಂಗೊಂಡ ದಿನಾಂಕದಿಂದ ಒಟ್ಟು ಸೇವಾ ಅವಧಿ | |
| 9 | ಸಿಬ್ಬಂದಿಯ ವಯೋ ನಿವೃತ್ತಿ ದಿನಾಂಕ | |
| 10 | ಕೆಸಿಎಸ್‌ಆರ್ ನಿಯಮ 247ಎ ರನ್ವಯ ಪರಿಗಣಿಸಬಹುದಾದ ಅಧಿಕ ಅರ್ಹತಾದಾಯಕ ಸೇವೆಯ ಗರಿಷ್ಠ ಅವಧಿ. | |
| 11 | ಮೇಲಾಧಿಕಾರಿಗಳ ಶಿಫಾರಸ್ಸು | |

ಪ್ರಾಂಶುಪಾಲರು

Rk-T.T.pujar-Timebond